# ಸರಕಾರಿ ಉರ್ದು ಪ್ರೌಢ ಶಾಲೆ(RMSA) ಅಣ್ಣಿಗೇರಿ

**ಮಾದರಿ ಪ್ರಶ್ನೆಪತ್ರಿಕೆ-06**

**ತರಗತಿ : 10ನೇ** | **ವಿಷಯ : ದ್ವಿತೀಯ ಭಾಷೆ ಕನ್ನಡ**

**ಅಂಕಗಳು : 80** | **ಸಮಯ : 3 ಗಂಟೆ**

---

**I ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಉತ್ತರಗಳನ್ನು ಕೊಡಲಾಗಿದೆ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ** **(1x4=4)**

1 ನಾಡನರಿ ಈ ಪದದಲ್ಲಿರುವ ಮಾತ್ರೆಗಳ ಒಟ್ಟು ಸಂಖ್ಯೆ:

ಎ) 04 ಬಿ) 06 ಸಿ) 03 ಡಿ) 05

2 ಪಂಚೇಂದ್ರಿಯಗಳು ಪದವು ಈ ಸಮಾಸಕ್ಕೆ ಉದಾಹರಣೆ:

ಎ) ಅಂಶಿ ಸಮಾಸ ಬಿ) ಕ್ರಿಯಾ ಸಮಾಸ ಸಿ) ಗಮಕ ಸಮಾಸ ಡಿ) ದ್ವಿಗು ಸಮಾಸ

3 ಮೊತ್ತಮೊದಲು ಪದವು ಈ ವ್ಯಾಕರಣಾಂಶವಾಗಿದೆ:

ಎ) ಜೋಡುನುಡಿ ಬಿ) ದ್ವಿರುಕ್ತಿ ಸಿ) ಅನುಕರಣಾವ್ಯಯ ಡಿ) ನುಡಿಗಟ್ಟು

4 ದಿವ್ಯೌಷಧಿ ಪದವು ಈ ಸಂಧಿಗೆ ಉದಾಹರಣೆ:

ಎ)ಯಣ್ ಸಂಧಿ ಬಿ)ಲೋಪಸಂಧಿ ಸಿ) ವೃದ್ಧಿಸಂಧಿ ಡಿ) ಗುಣಸಂಧಿ

**II ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ** **(1x12=12)**

5 ಗಿಳಿಯ ಯಾವ ಗುಣವು ಮನುಷ್ಯನಿಗೆ ಆದರ್ಶವಾಗುವುದು?

6 ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು?

7 ಪುಟ್ಟರಾಜರು ಯಾರ ತತ್ವಗಳನ್ನು ಹಿಂಬಾಲಿಸುತ್ತಿದ್ದರು?

8 ಬನದ ಗೋಪಾಲ ಯಾರು? ಕಾಡಿನಲ್ಲಿ ಅವನ ಕೆಲಸವೇನು?

9 ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ?

10 ಲಂಡನ್ ವಿಶ್ವವಿದ್ಯಾಲಯದ ಮುಂದೆ ಗಾಂಧೀಜಿಯವರ ಪ್ರತಿಮೆಯನ್ನು ಏಕೆ ಸ್ಥಾಪಿಸಲಾಗಿದೆ?

11 ವಿದ್ಯಾರ್ಥಿಗಳು ಕಾಫೀ ಕುಡಿಯಲು ಎಂತಹ ಕಪ್ಪುಗಳನ್ನು ಆರಿಸಿಕೊಂಡರು?

12 ಕೆರೆಗಳು ನಿಷ್ಪ್ರಯೋಜಕ ಆಗುವುದು ಯಾವಾಗ?

13 ಅಶ್ವಮೇಧ ಯಾಗಕ್ಕೆ ಯಾವ ಪ್ರಾಣಿಯನ್ನು ಬಲಿ ಕೊಡಲಾಗುತ್ತದೆ?

14 ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಬಾರದು ಏಕೆ?

15 ಕೆರೆಯಲ್ಲಿ ಯಾವ ಮೀನುಗಳಿದ್ದವು?

16 ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೊಳ್ಳುತ್ತಾಳೆ?

SHARANU SH

**III ಈ ಕೆಳಗಿನ ಪ್ರಶ್ನೆಗಳಿಗೆ 3 ಅಥವಾ 4 ವಾಕ್ಯಗಳಲ್ಲಿ ಉತ್ತರಿಸಿ.** **(8X2=16)**

17 ಪೆನ್ನು ಖಡ್ಗಕ್ಕಿಂತ ಹರಿತವಾದುದು ಏಕೆ?

18 ಗೋಪಾಲನು ಕಾಡಿನಿಂದ ಮನೆಗೆ ಬರಲು ಏಕೆ ಹೆದುರುತ್ತಿದ್ದನು?

19 ಬಸವಣ್ಣನವರು ಜನರ ಯಾವ ಧಾರ್ಮಿಕ ನಂಬಿಕೆಗಳನ್ನು ಖಂಡಿಸಿದ್ದಾರೆ?

20 ಬಾಳೆ ಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು?

21 ಅಡಿಗರು ಯಾವುದನ್ನು ಹೇಡಿತನ ಹಾಗೂ ಹೆಣ್ತನ ಎಂದು ಕರೆದಿದ್ದಾರೆ?

22 ಚೈತ್ರದಲ್ಲಿ ಪ್ರಾಣಿ ಪಕ್ಷಿಗಳ ಚಟುವಟಿಕೆಗಳು ಕವಿಗೆ ಹೇಗೆ ಗೋಚರಿಸಿದವು?

23 ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕಾಗಿದೆ?

24 ವೈದ್ಯರು ತನ್ನ ವೃತ್ತಿಯ ಕುರಿತು ಹೆಂಡತಿ ರತ್ನಳಿಗೆ ಏನು ಹೇಳಿದಳು?

**IV ಈ ಕೆಳಗಿನ ಸಾಹಿತಿಯ ಜನನ,ಸ್ಥಳ,ಕಾಲ,ಕೃತಿ,ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **(1X3=3)**

25 ರಮೇಶಗೌಡ ಎಂ.ಕೆ.

**V ಈ ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ** **(1x3=3)**

26 ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು
ದೀಪದೆದುರಿಗೆ ತಿಮಿರ ಸರಿಯುವಂತೆ
ಶಾಂತಿಯಲಿ ಬದುಕನೀ ಕರ್ತವ್ಯವನು ಮುಗಿಸು
ಕೂಗಾಡಿ,ಹಾರಾಡಿ ಫಲವದೇನು?

**VI ಈ ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ ಸಮನ್ವಯಗೊಳಿಸಿ ಬರೆಯಿರಿ** **(1x3=3)**

27 ಗಿಡ ಗಿಡವು ಅಪ್ಪಿಕೊಂಡು ಕುಣಿಯುವಂತೆ ಕಂಡಿತು

**VII ಗಾದೆ ವಿಸ್ತರಿಸಿ ಬರೆಯಿರಿ.** **(1x3=3)**

28 ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ

**ಅಥವಾ**

ಒಕ್ಕಲಿಗ ಒಕ್ಕದಿರೆ ಜಗವೆಲ್ಲಾ ಬಿಕ್ಕುವುದು

**VIII ಈ ಕೆಳಗಿನ ವಾಕ್ಯಗಳಿಗೆ ಸಂದರ್ಭವನ್ನು ಸ್ವಾರಸ್ಯದೊಂದಿಗೆ ವಿವರಿಸಿ.** **(5X3=15)**

29 ಹಲವಾರು ವರ್ಷದಿಂದ ಈ ಮರ ನನಗೆ ಆಶ್ರಯ ಕೊಟ್ಟಿದೆ

30 ಅಲಂಕಾರಗಳ ಬೆನ್ನೆತ್ತಿ ಓಡಿ ಓಡಿ ಜೀವನವನ್ನು ಮರೆಯಬೇಡಿ

31 ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಶಾಲೆ ಅದು

32 ಶಿವ ಶಿವ ಕಾದಿಗೆಲೆದೆವು

33 ನನ್ನ ಮೇಲೆ ಹತ್ತಿ ಹೋದ ಕೆಲವರು ನನಗೆ ಕೈ ಬೀಸಿದ್ದಾರೆ

SHARANUSH

**IX ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **(1x4=4)**

34 ಏಕಾಂಗಿ ವೀರನಂತೆ .....................................

.....................................................................

.....................................................................

....................................ಕತ್ತಲಲ್ಲಿ ನಡೆದನು

**ಅಥವಾ**

ಕಾಡು ಕಾಡು ಅಲೆದ...........................................

......................................................................

..................................ಮಹಾಬೆಳಕೊಂದು ಕಂಡಿತು

**X ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರಿಸಿ.** **(1x4=4)**

35 ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂನ ವಿಶೇಷತೆ ಏನು?

**ಅಥವಾ**

ಥೇಮ್ಸ್ ನದಿಯ ಸುತ್ತಮುತ್ತ ಲೇಖಕರು ಕಂಡ ದೃಶ್ಯಗಳಾವುವು?

**XI ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **(2 x2=4)**

**36** ಒಂದು ಸಲ ಸಂತ ಇಬ್ರಾಹಿಮನು ದೇಶ ಸಂಚಾರಕ್ಕೆ ಹೊರಟನು.ಸಂಚರಿಸುತ್ತ ಒಬ್ಬ ಧನಿಕರ ತೋಟಕ್ಕೆ ಬಂದನು.ಆ ಧನಿಕನು ಸಂತ ಇಬ್ರಾಹಿಮನ ಸಾಧಾರಣ ಉಡುಪನ್ನು ಕಂಡು ಅವನನ್ನು ಒಬ್ಬ ಸಾಮಾನ್ಯ ಮನುಷ್ಯನೆಂದು ಭಾವಿಸಿದನು.ಆ ಧನಿಕನಿಗೆ ತೋಟ ಕಾಯಲು ಒಬ್ಬ ಆಳು ಬೇಕಾಗಿದ್ದನು."ನೀನು ನನ್ನ ತೋಟದ ಕಾವಲು ಮಡುವೆಯಾ? ಎಂದು ಆ ಧನಿಕನು ಇಬ್ರಾಹಿಮನನ್ನು ಕೇಳಿದನು.ಇಬ್ರಾಹಿಮನಿಗೆ ಆ ತೋಟದ ಶಾಂತ ವಾತಾವರಣ ತುಂಬ ಹಿಡಿಸಿತು.ಏಕಾಂತದಲ್ಲಿ ದೇವರ ಧ್ಯಾನ ಮಾಡಲು ಅವನಿಗೆ ಸೂಕ್ತವಾದ ಸ್ಥಳವೆನಿಸಿತು.ಆದ್ದರಿಂದ ಧನಿಕನ ಮಾತನ್ನು ಕೂಡಲೇ ಒಪ್ಪಿಕೊಂಡನು.ಹೀಗೆ ಬಹಳ ದಿನಗಳು ಕಳೆದು ಹೋದವು.ಇಬ್ರಾಹಿಮನು ತುಂಬ ಮುತವರ್ಜಿಯಿಂದ ತೋಟದ ಕಾವಲು ಮಾಡುತ್ತಿದ್ದನು.ಒಂದು ದಿನ ಆ ಧನಿಕನು ತನ್ನ ಮಿತ್ರರೊಂದಿಗೆ ತನ್ನ ತೋಟಕ್ಕೆ ಬಂದನು.ಮಾವಿನ ಮರದಲ್ಲಿ ಮಾವಿನ ಹಣ್ಣುಗಳಾಗಿದ್ದವು.ಧನಿಕನು ಇಬ್ರಾಹಿಮನಿಗೆ ಕೆಲವು ಮಾವಿನ ಹಣ್ಣುಗಳನ್ನು ಕಿತ್ತು ತರುವಂತೆ ಹೇಳಿದನು.ಇಬ್ರಾಹಿಮನು ಒಂದು ಮರದಿಂದ ಮಾವಿನ ಹಣ್ಣುಗಳನ್ನು ಕಿತ್ತು ತಂದನು.ಆದರೆ ಅವನು ಕಿತ್ತು ತಂದ ಹಣ್ಣುಗಳೆಲ್ಲ ಹುಳಿಯಾಗಿದ್ದವು.ಆಗ ಧನಿಕನು ಇಬ್ರಾಹಿಮನನ್ನು ಕುರಿತು 'ಹಲವು ದಿನಗಳಿಂದ ನನ್ನ ತೋಟದ ಕಾವಲು ಕಾಯುತ್ತಿರುವೆ,ಆದರೆ ಯಾವ ಮರದ ಹಣ್ಣು ಹುಳಿಯಾಗಿದೆ ಯಾವ ಮರದ ಹಣ್ಣು ಸಿಹಿಯಾಗಿದೆ ಎಂದು ನಿನಗೆ ಗೊತ್ತಿಲ್ಲವೇ?ಎಂದು ಕೇಳಿದನು.ಧನಿಕನ ಮಾತನ್ನು ಕೇಳಿ ಇಬ್ರಾಹಿಮನು ನಗತೊಡಗಿದನು.ಅವನು ಏಕೆ ನಗುತ್ತಿರುವನು ಎಂದು ಧನಿಕನಿಗೆ ತಿಳಿಯಲಿಲ್ಲ. 'ನೀನು ಏಕೆ ನಗುತ್ತಿರುವೆ?ಎಂದು ಧನಿಕನು ಇಬ್ರಾಹಿಮನಿಗೆ ಕೇಳಿದನು.ಆಗ ಇಬ್ರಾಹಿಮನು 'ಒಡೆಯರೇ,ನೀವು ನನ್ನನ್ನು ನೇಮಿಸಿರುವುದು ತೋಟವನ್ನು ಕಾಯುವುದಕ್ಕೆ ಮಾವಿನ ಹಣ್ಣುಗಳನ್ನು ತಿನ್ನುವುದಕ್ಕಲ್ಲ.ನಿಮ್ಮ ಅಜ್ಞೆ ಇಲ್ಲದೆ ನಾನು ಹಣ್ಣುಗಳನ್ನು ತಿನ್ನಲು ಹೇಗೆ ಸಾಧ್ಯ? ನಾನು

SHARANUSH

ಹಣ್ಣುಗಳನ್ನು ತಿಂದೇ ಇಲ್ಲ ಎಂದು ಮೇಲೆ ನನಗೆ ಯಾವ ಮರದ ಹಣ್ಣು ಹುಳಿ ಯಾವ ಹಣ್ಣು ಸಿಹಿ ಎಂದು ಹೇಗೆ ಗೊತ್ತಾದಿತು?ಎಂದು ಕೇಳಿದನು.ಇಬ್ರಾಹಿಮನ ಪ್ರಾಮಾಣಿಕತೆಯನ್ನು ಕಂಡು ಧನಿಕನು ತಲೆದೂಗಿದನು ಮತ್ತು ತನ್ನ ನಡುವಳಿಕೆಗಾಗಿ ಇಬ್ರಾಹಿಮನಲ್ಲಿ ಕ್ಷಮೆ ಯಾಚಿಸಿದನು.

**ಪ್ರಶ್ನೆಗಳು**

ಅ)ಧನಿಕ ಕೇಳಿದ ಸಿಹಿ ಮತ್ತು ಹುಳಿ ಹಣ್ಣುಗಳ ವಿಚಾರದಲ್ಲಿ ಇಬ್ರಾಹಿಮ್‌ನ ಪ್ರತ್ಯುತ್ತರ ಏನಾಗಿತ್ತು?

ಆ) ಇಬ್ರಾಹಿಮ ತೋಟದ ಕಾವಲಿಗೆ ಒಪ್ಪಲು ಕಾರಣಗಳೇನು?

**XII ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ವಿಷಯಕ್ಕೆ ಪ್ರಬಂಧವನ್ನು ಬರೆಯಿರಿ. (1X4=4)**

37 ಪರಿಸರ ಮಾಲಿನ್ಯಕ್ಕೆ ಕಾರಣಗಳು ಮತ್ತು ಪರಿಹಾರೋಪಾಯಗಳು

**ಅಥವಾ**

ಪುಸ್ತಕದ ಮಹತ್ವ

**XIII ಈ ಕೆಳಗಿನ ಯವೂದಾದರೂ ಒಂದು ಪತ್ರವನ್ನು ಬರೆಯಿರಿ (1X5=5)**

38 ನಿಮ್ಮನ್ನು ಕೋಲಾರದ ಶ್ರೀನಿವಾಸಪುರದಲ್ಲಿ ವಾಸಿಸುತ್ತಿರುವ ಸೋನು/ಅಖಿಲ್ ಎಂದು ಭಾವಿಸಿಕೊಂಡು ಗದಗ ನಗರದಲ್ಲಿರುವ ನಿಮ್ಮ ಗೆಳೆಯ/ಗೆಳತಿಯಾದ ವಿನೂತ/ಚಂದನ್ ರವರಿಗರ ನಿಮ್ಮ ಮನೆಯ ನೂತನ ಗೃಹಪ್ರವೇಶದ ಕಾರ್ಯಕ್ರಮಕ್ಕೆ ಆಗಮಿಸುವಂತೆ ಪತ್ರ ಬರೆಯಿರಿ

**ಅಥವಾ**

ನಿಮ್ಮನ್ನು ಕಾರವಾರದ ಸರಕಾರಿ ಉರ್ದು ಪ್ರೌಢ ಶಾಲೆಯಲ್ಲಿ ಕಲಿಯುತ್ತಿರುವ ಮಹಮ್ಮದ್/ಮುಸ್ಕಾನ್ ಎಂದು ಭಾವಿಸಿಕೊಂಡು ನಿಮ್ಮ ವರ್ಗಾವಣಾ ಪ್ರಮಾಣ ಪತ್ರ ನೀಡುವಂತೆ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೊಂದು ಮನವಿ ಪತ್ರ ಬರೆಯಿರಿ

***********

SHARANUSH